# ರಂಗಭೂಮಿ ಮತ್ತು ಚಲನಚಿತ್ರ

**ಲೋಕೇಶ ಎಂ. ಆರ್.***

**DOI: https://doi.org/10.5281/zenodo.23096941**

**ABSTRACT**

ಕನ್ನಡ ಚಲನಚಿತ್ರ ರಂಗದ ಉಗಮ ಮತ್ತು ವಿಕಾಸದಲ್ಲಿ ವೃತ್ತಿ ರಂಗಭೂಮಿಯ ಪಾತ್ರ ಹಾಗೂ ಪ್ರಭಾವವನ್ನು ಇಲ್ಲಿ ಐತಿಹಾಸಿಕ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದೆ. ನಾಟಕದ ಮೂಲದಿಂದ ಬಂದ ಸಿನಿಮಾವು ಹೇಗೆ ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಪ್ರಭಾವಿ ಮಾಧ್ಯಮವಾಗಿ ಬೆಳೆಯಿತು ಎಂಬುದನ್ನು ವಿವರಿಸಲಾಗಿದೆ. 'ಸತಿ ಸುಲೋಚನಾ', 'ಭಕ್ತ ಧ್ರುವ', 'ಸಂಸಾರ ನೌಕೆ'ಯಂತಹ ಆರಂಭಿಕ ವಾಕ್ಚಿತ್ರಗಳು ಸಂಪೂರ್ಣವಾಗಿ ರಂಗಭೂಮಿಯ ಕಥೆ, ಹಾಡು ಮತ್ತು ಕಲಾವಿದರನ್ನೇ ನೆಚ್ಚಿಕೊಂಡಿದ್ದವು. ಗುಬ್ಬಿ ವೀರಣ್ಣ, ಸುಬ್ಬಯ್ಯ ನಾಯ್ಡು ಅವರಂತಹ ರಂಗ ದಿಗ್ಗಜರು ಬೆಳ್ಳಿತೆರೆಗೆ ಭದ್ರ ಬುನಾದಿ ಹಾಕಿಕೊಟ್ಟರು. ನಾಟಕ ಮತ್ತು ಚಲನಚಿತ್ರಗಳ ನಡುವಿನ ಪ್ರಾಯೋಗಿಕ ವ್ಯತ್ಯಾಸಗಳನ್ನು ಗುರುತಿಸುವ ಜೊತೆಗೆ, ಕಾಲಘಟ್ಟದಲ್ಲಿ ಸಿನಿಮಾವು ರಂಗಭೂಮಿಗೆ ಮತ್ತು ಪ್ರಸ್ತುತ ದೂರದರ್ಶನ ವಾಹಿನಿಗಳು ಸಿನಿಮಾಗೆ ಒಡ್ಡಿರುವ ಸವಾಲುಗಳನ್ನು ಚರ್ಚಿಸಲಾಗಿದೆ. ಪ್ರೇಕ್ಷಕರ ಬದಲಾಗುವ ಅಭಿರುಚಿಗೆ ತಕ್ಕಂತೆ ಈ ಕಲಾಮಾಧ್ಯಮಗಳು ಕಾಲಕಾಲಕ್ಕೆ ಒಗ್ಗಿಕೊಳ್ಳಬೇಕಾದ ಅನಿವಾರ್ಯತೆಯನ್ನು ನಿರೂಪಿಸಲಾಗಿದೆ.

**KEYWORDS:** ರಂಗಭೂಮಿ, ಚಲನಚಿತ್ರ, ಕನ್ನಡ ವಾಕ್ಚಿತ್ರಗಳು, ವೃತ್ತಿ ನಾಟಕ ಮಂಡಳಿಗಳು, ಕಲಾ ಮಾಧ್ಯಮ.

* **ಲೋಕೇಶ ಎಂ. ಆರ್.**, ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊನ್ನಾಳಿ.

ನಾಟಕದ ಮುಂದಿನ ಬದಲಾಗಿ ವಿಜ್ಞಾನ, ತಂತ್ರಜ್ಞಾನ ಹಾಗೂ ಆಧುನಿಕತೆಯ ಸ್ಪರ್ಶದೊಂದಿಗೆ ನಡೆದು ಬಂದ ಚಲನಚಿತ್ರ ಇಂದು ಹೆಚ್ಚು ಜನಪ್ರಿಯ ಹಾಗೂ ಪ್ರಭಾವಿ ಮಾಧ್ಯಮ. ಭಾಷೆಯ ಮಡಿವಂತಿಕೆ ಇಲ್ಲದೆ ಬೆಳೆದು ಬಂದ ಸಿನಿಮಾ ಎಂಬ ಭವ್ಯ ಕಟ್ಟಡಕ್ಕೆ ರಂಗಭೂಮಿಯೇ ಅಡಿಪಾಯ. ನವ ಆವಿಷ್ಕಾರಗಳನ್ನು ಮೈಗೂಡಿಸಿಕೊಂಡು ಬದುಕಿನ ಸಂವೇದನೆಗಳನ್ನು ಅಭಿವ್ಯಕ್ತಿಸುವ ಮೂಲಕ ಅಬಾಲ ವೃದ್ಧರನ್ನು ಸೆಳೆಯುವ ಮಾಯಾಲೋಕವಾದ ಚಲನಚಿತ್ರದ ಹಿನ್ನೆರಳು ವೃತ್ತಿ ರಂಗಭೂಮಿ ಎಂಬುದು ನಿರ್ವಿವಾದ. ನಾಟಕ ಈ ಪದವನ್ನು ನಾಟ್ಯ ಎಂಬ ಪದದ ಮೂಲದಿಂದ ಗ್ರಹಿಸಬಹುದು. ನಾಟ್ಯ-ನಟ ಎಂಬ ಧಾತುವಿನಿಂದ ಬಂದಿದ್ದು ನಟನೆ, ನೃತ್ಯ ಎಂಬ ಅರ್ಥಗಳನ್ನು ಹೊಂದಿದೆ. ಒಂದು ಕಥೆಯನ್ನು ನೃತ್ಯ, ಗೀತೆ, ಸಂಭಾಷಣೆಗಳ ಮೂಲಕ ಒಂದು ಚೌಕಟ್ಟಿಗೆ ಅಳವಡಿಸಿ ನೋಡುವವರ ಕಿವಿಗೆ ಮನಸ್ಸಿಗೆ ಆನಂದ ನೀಡುವುದನ್ನು ರಮ್ಯ ಪ್ರಕಾರ ನಾಟಕ ಎಂದು ವಿ. ಸೀತಾರಾಮಯ್ಯನವರು ಅಭಿಪ್ರಾಯಪಟ್ಟಿದ್ದಾರೆ. ಕನ್ನಡದಲ್ಲಿ ಒಂದು ಸಾಹಿತ್ಯ ಪ್ರಕಾರವಾಗಿ ನಾಟಕ ಬೆಳೆದು ಬಂದದ್ದು ಶತಮಾನದ ಹಿಂದೆ ಆದರೂ ಜನಪದದಲ್ಲಿ ಅಭಿನಯ ಮಾಧ್ಯಮವಾಗಿ ಪೂರ್ವದಿಂದಲೂ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿತ್ತು. ಜನಪದ ರಂಗಭೂಮಿಯ ನೆಲೆಯಲ್ಲಿ ಯಕ್ಷಗಾನ, ಬಯಲಾಟ, ತೊಗಲುಗೊಂಬೆ ಆಟ, ಸೂತ್ರ ಗೊಂಬೆ ಆಟ, ಸಣ್ಣಾಟ ಮತ್ತು ದೊಡ್ಡಾಟಗಳನ್ನು ಪರಿಚಯಿಸಬಹುದು.

ಕನ್ನಡದಲ್ಲಿ ಪಾರಸಿ ಕಂಪನಿಗಳಿಂದ ಪ್ರೇರಣೆಗೊಂಡು ಮೈಸೂರು ಅರಸರ ಆಶ್ರಯದಲ್ಲಿ ಚಾಮರಾಜೇಂದ್ರ ನಾಟಕಸಭಾ (1882) ಸ್ಥಾಪನೆಯ ಮೂಲಕ ವೃತ್ತಿರಂಗಭೂಮಿಯ ಅಭ್ಯುದಯವಾಯಿತು. ರಂಗಸಜ್ಜಿಕೆ, ವಸ್ತು, ವೇಷಭೂಷಣ, ಸಂಗೀತ, ಸಾಹಿತ್ಯ, ಪಾತ್ರ ಹೀಗೆ ನಾಟಕದ ಅವಯವಗಳಲ್ಲಿ ಸಾಂಪ್ರದಾಯಿಕತೆಗೆ ಪ್ರತಿಯಾಗಿ ಹೊಸತನವನ್ನು ಅಳವಡಿಸಿಕೊಂಡಿದ್ದೇ ವೃತ್ತಿ ರಂಗಭೂಮಿಯ ವೈಶಿಷ್ಟ್ಯ . ಸಂಸ್ಕೃತಿ, ಕಲೆ, ಪರಂಪರೆಯ ವರ್ಗಾವಣೆ ತನ್ಮೂಲಕ ಮನೋರಂಜನೆಯ ಭಾಗವಾಗಿಯೂ ಬೆಳೆದು ಬಂದ ಕನ್ನಡ ವೃತ್ತಿರಂಗಭೂಮಿಗೆ ವೀರಣ್ಣನವರ (ಗುಬ್ಬಿ ) ಶ್ರೀ ಚನ್ನಬಸವೇಶ್ವರ ಕೃಪಾಪೋಷಿತ ನಾಟಕ ಮಂಡಳಿ (1884), ವರದಾಚಾರ್ಯರ ರತ್ನಾವಳಿ ಥಿಯೇಟ್ರಿಕಲ್ಸ್ (1902), ಸುಬ್ಬಯ್ಯ ನಾಯ್ಡು ಅವರ ಶ್ರೀ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿ, ಶಿರಹಟ್ಟಿ ವೆಂಕೋಬರಾಯರ ಶ್ರೀ ಮಹಾಲಕ್ಷ್ಮಿ ಪ್ರಸಾದಿತ ನಾಟಕ ಮಂಡಳಿ (1906), ಹಿರಣ್ಣಯ್ಯನವರ ಮಿತ್ರ ಮಂಡಳಿ ಮೊದಲಾದವುಗಳ ಕೊಡುಗೆ ಅನನ್ಯವಾದದ್ದು.

ಮಾನವ ಬದುಕಿನ ಆವಿಷ್ಕಾರಗಳಲ್ಲಿ ಒಂದಾದ ಚಲನಚಿತ್ರವು ನಾಟಕ ಮೊದಲಾದ ಪ್ರಯೋಗಗಳನ್ನು ನಿಯಮಿತವಾಗಿ ದಾಖಲು ಮಾಡಿ ಯಥಾವತ್ತಾಗಿ ಪುನಃ ಪುನಃ ಪ್ರದರ್ಶಿಸುವ ನೆಲೆಯಲ್ಲಿ ರೂಪುಗೊಂಡಿರುವಂಥದ್ದು. ವೈಜ್ಞಾನಿಕ ಆವಿಷ್ಕಾರಗಳ ಫಲವಾಗಿ (1895) ರಲ್ಲಿ ಫ್ರಾನ್ಸ್‌ನ ಲೂಮಿಯರ್ ಸಹೋದರರು ಈ ಚಲನಚಿತ್ರವನ್ನು ವಿಶ್ವಕ್ಕೆ ಪರಿಚಯಿಸಿದರು. ಮೂಕಿ ಚಿತ್ರದಿಂದ ಆರಂಭವಾದ

ಚಿತ್ರಪರಂಪರೆ ಕನ್ನಡದ ನೆಲದಲ್ಲಿ ಸೂರ್ಯ ಫಿಲಂಸ್ ಹಾಗೂ ಕರ್ನಾಟಕ ಫಿಲಂ ಕಾರ್ಪೊರೇಷನ್ ಚಿತ್ರಗಳ ಮೂಲಕ ಚಿಗುರೊಡೆಯಿತು.

**ನಾಟಕ ಮತ್ತು ಸಿನಿಮಾ ಸಂಬಂಧಾಂತರಗಳು:**

1. ನಾಟಕದಲ್ಲಿ ಪ್ರದರ್ಶನದ ಪೂರ್ವದಲ್ಲಿ ಕಲಾವಿದರು ಅಭಿನಯದ ತಾಲೀಮಿನೊಂದಿಗೆ ರಂಗವನ್ನು ಪ್ರವೇಶಿಸುತ್ತಾರೆ ಆದರೆ ಸಿನಿಮಾ ಕಲಾವಿದರಲ್ಲಿ ಈ ಬಗೆಯ ಪೂರ್ವಭ್ಯಾಸ ಪರಿಮಿತವೆಂದೇ ಹೇಳಬಹುದು.
2. ನಾಟಕವು ಪ್ರೇಕ್ಷಕನ ಸಮ್ಮುಖದಲ್ಲಿ ನೇರವಾಗಿ ಪ್ರದರ್ಶನಗೊಂಡರೆ ಸಿನಿಮಾದಲ್ಲಿ ಅಭಿನಯದ ಚಿತ್ರೀಕೃತ ದೃಶ್ಯಮಾಧ್ಯಮಗಳನ್ನು ಪ್ರತಿಸ್ಥಾಪಿಸಲಾಗುತ್ತದೆ.
3. ಒಂದು ನಾಟಕವನ್ನು ನಿರ್ದಿಷ್ಟ ಕಾಲ ಕಲಾವಿದರಿಂದ ನಿರ್ದಿಷ್ಟ ಸ್ಥಳ ಮತ್ತು ಕಾಲದಲ್ಲಿ ಮಾತ್ರ ಪ್ರದರ್ಶಿಸಬಹುದು ಆದರೆ ನಿರ್ದಿಷ್ಟ ಸಿನಿಮಾವನ್ನು ಬೇರೆ ಬೇರೆ ಸ್ಥಳಗಳಲ್ಲಿ ಏಕಕಾಲದಲ್ಲಿ ಪ್ರದರ್ಶಿಸಬಹುದು.
4. ಒಂದು ನಾಟಕವನ್ನು ಬೇರೊಂದು ಸ್ಥಳದಲ್ಲಿ ಪ್ರದರ್ಶಿಸಬೇಕಾದರೆ ಇಡೀ ಕಂಪನಿಯ ರಂಗ ಪರಿವಾರವೇ ಸ್ಥಳಾಂತರಗೊಳ್ಳಬೇಕು ಆದರೆ ಸಿನಿಮಾಕ್ಕೆ ಅದರ ಅಗತ್ಯವಿಲ್ಲ.
5. ನಾಟಕದ ಮರು ಪ್ರದರ್ಶನದಲ್ಲಿ ಕಲಾವಿದರು ಪುನಃ ಶ್ರಮವಹಿಸಬೇಕಾಗುತ್ತದೆ. ಸಿನಿಮಾದಲ್ಲಿ ಹಾಗಾಗದು. ಕಲಾವಿದರಿಗೆ ತಮ್ಮ ಕಾರ್ಯವನ್ನು ಪುನರಾವರ್ತಿಸುವ ಶ್ರಮವಿರುವುದಿಲ್ಲ.
6. ನಾಟಕದಲ್ಲಿ ಪ್ರೇಕ್ಷಕ ಎದು...
7. ಕನ್ನಡ ಚಲನಚಿತ್ರದ ಬಹುಮುಖ್ಯ ವಿಚಾರವನ್ನು ಪರಿಶೀಲಿಸುವಾಗ ರಂಗಭೂಮಿಯ ಹಿನ್ನೆಲೆಯಲ್ಲಿ ಅದನ್ನು ಪರಿಭಾವಿಸುವುದು ಅಗತ್ಯ ಹಾಗೂ ಅನಿವಾರ್ಯ ಕೂಡ ಕಾರಣ ಕನ್ನಡ ಚಿತ್ರ ಜಗತ್ತಿನ ತೊಟ್ಟಿಲು ತೂಗಿದ ಕೈಗಳು ರಂಗಭೂಮಿಯವೇ. ಇಲ್ಲಿನ ರಂಗಕರ್ಮಿಗಳೇ ಕನ್ನಡ ಚಲನಚಿತ್ರದ ಅಭಿನಯದ ಚೇತನಗಳು.
8. ನಾಟಕ ಮತ್ತು ಚಲನಚಿತ್ರ ಎರಡರಲ್ಲೂ ಅಭಿನಯವೇ ಜೀವಾಳ. ಪ್ರಾರಂಭದ ಮೂಕಿ ಚಿತ್ರಗಳಲ್ಲಿ ಧ್ವನಿ ಇಲ್ಲದಿದ್ದರೂ ಭಾಷಾ ಅಭಿವ್ಯಕ್ತಿಗೆ ಅಭಿನಯವೇ ಮಾಧ್ಯಮವಾಗಿತ್ತು. ಜೀವಂತ ಪರಿಸರದ ದೃಶ್ಯಮಾಲೆ ಆ ಹೊತ್ತಿಗೆ ಮಾನವನೆದುರು ಹೊಸ ಲೋಕವನ್ನೇ ತೆರೆದಿಡುವ ಪ್ರಯತ್ನವಾಗಿತ್ತು. ಧ್ವನಿಯೇ ಇಲ್ಲದ್ದರಿಂದ ಭಾಷಿಕ, ಪ್ರಾದೇಶಿಕ ಮಿತಿಗಳಿಲ್ಲದೆ ಭಾರತೀಯ ಸಿನಿಮಾಗಳು ದೇಶಾದ್ಯಂತ ಬಿತ್ತರಾಗಲು ಅವಕಾಶಗಳಿದ್ದು ಈ ಮೂಕಿ ಚಿತ್ರಗಳೆಡೆಗೆ ಶಿವರಾಮ ಕಾರಂತರು, ದೇವಡು ಅವರು, ಕೈಲಾಸಂ ರವರು ಮೊದಲಾದ ಸಾಹಿತಿಗಳು ಆಕರ್ಷಿತರಾಗಿ ಕಾರ್ಯೋನ್ಮುಖರಾದದ್ದು ಸ್ಮರಣೀಯ ಅಂಶವಾಗಿದೆ.

ಸಂವಹನಕ್ಕೆ ಮಾತಿನಷ್ಟು ಪರಿಣಾಮಕಾರಿ ಸಾಧನ ಮತ್ತೊಂದಿಲ್ಲ. ನಾಟಕದಲ್ಲಿನ ಪಾತ್ರಗಳು ಸಂಭಾಷಣೆಯ ಮೂಲಕ ಪ್ರೇಕ್ಷಕರಿಗೆ ಸುಲಭವಾಗಿ ತಮ್ಮ ಭಾವವನ್ನು ದಾಟಿಸಬಲ್ಲವು. ಈ ಮೌಖಿಕ ಶಕ್ತಿ ಇಲ್ಲದಿರುವುದೇ ಮೂಕಿ ಚಿತ್ರಗಳ ಮಿತಿಯಾಗಿತ್ತು. ಮುಂದೆ ಮಾನವನ ಕುತೂಹಲ ನಿರಂತರ ಪ್ರಯತ್ನಗಳ ಫಲವಾಗಿ ಚಲನಚಿತ್ರದಲ್ಲಿ ಧ್ವನಿಯ ಕ್ರಾಂತಿಯೊಂದಿಗೆ 1934ರಲ್ಲಿ ಕನ್ನಡದ ಮೊದಲ ವಾಕ್ಚಿತ್ರ ಸತಿ ಸುಲೋಚನಾ ಮೂಲಕ ಬೆಳ್ಳಿತರೆಯ ಜೀವಂತಿಕೆಗೆ ಹೊಸ ಭಾಷ್ಯ ಬರೆದದ್ದು ರಂಗಭೂಮಿಯ ಪರಿವಾರದವರೇ. ರಂಗಸಜ್ಜಿಕೆಯಲ್ಲಿ ನಾಂದಿ ರಂಗ ಪ್ರಾರ್ಥನೆ ಗೀತೆಯೊಂದಿಗೆ ಮೊದಲಾಗಿ ಕಥೆ, ಪಾತ್ರಗಳು, ತಕ್ಕ ವೇಷಭೂಷಣ, ಸಂಭಾಷಣೆ, ಸಂಗೀತ, ಸಾಹಿತ್ಯ, ನೃತ್ಯ, ಅಭಿನಯಗಳ ಸಂಗಮದಲ್ಲಿ ರೂಪುಗೊಂಡ ನಾಟಕ ಪ್ರೇಕ್ಷಕರಿಗೆ ಮನೋರಂಜನೆಯ ಮೂಲಕ ಬದುಕಿನ ಪಾಠವನ್ನು ಹೇಳುತ್ತದೆ. ಈ ಚೌಕಟ್ಟನ್ನೇ ಆಧಾರವಾಗಿಟ್ಟುಕೊಂಡು ನವೀನ ತಂತ್ರಜ್ಞಾನವನ್ನು ಒಗ್ಗೂಡಿಸಿಕೊಂಡು ಬೆಳೆದದ್ದೇ ಸಿನಿಮಾ. ಕನ್ನಡದ ಆರಂಭಿಕ ವಾಕ್ಚಿತ್ರಗಳನ್ನು ಗಮನಿಸಿದಾಗ ನಾಟಕ ಸಿನಿಮಾಗಳ ಅವಿನಾಭಾವ ಸಂಬಂಧ ವೇದ್ಯವಾಗುತ್ತದೆ. ಈ ಹಂತದ ಚಿತ್ರಗಳಲ್ಲಿನ ಕಲಾವಿದರ ಭಾವ, ವೇಷಭೂಷಣ, ಸಂಭಾಷಣೆಯ ಶೈಲಿ, ಹಾಡು, ನೃತ್ಯ ಎಲ್ಲವೂ ರಂಗಸಜ್ಜಿಕೆ ಇಲ್ಲದ ಚಿತ್ರೀಕೃತ ನಾಟಕವನ್ನೇ ನೋಡಿದ ಅನುಭವವನ್ನು ಒದಗಿಸಿದ ಪ್ರಯತ್ನವಾಗಿದ್ದವು ಎಂಬುದು ವಿದ್ವಾಂಸರ ಅಭಿಪ್ರಾಯ. ಅಂದು ಬೆಂಗಳೂರಿನ ಪ್ಯಾರಾಮೌಂಟ್ ಚಿತ್ರಮಂದಿರದಲ್ಲಿ ತೆರೆಕೊಂಡಿದ್ದ ಸತಿ ಸುಲೋಚನಾ ಕನ್ನಡದ ಮೊದಲ ಚಿತ್ರ. ಈ ಪೂರ್ವದಲ್ಲಿ ನಾಟಕವಾಗಿ ಪ್ರಯೋಗ ಕಂಡಿದ್ದ ರಾಮಾಯಣದ ಉಪಕಥೆಯನ್ನು ಆಧರಿಸಿ ನಾಗೇಂದ್ರ ರಾಯರು ಸ್ವತಃ ಅಭಿನಯಿಸಿ ಸಂಗೀತ ನಿರ್ದೇಶನದ ಜವಾಬ್ದಾರಿಯೊಂದಿಗೆ ಕನ್ನಡದ ಮೊದಲ ಸಂಗೀತ ನಿರ್ದೇಶಕರು ಎಂದು ಕರೆಸಿಕೊಂಡರೆ, ರಂಗ ಕಲಾವಿದರಾಗಿದ್ದು ಮೂಕಿ ಚಿತ್ರಗಳಲ್ಲಿ ಅಭಿನಯಿಸಿದ್ದ ಸುಬ್ಬಯ್ಯ ನಾಯ್ಡು ಬೆಳ್ಳಿ ತೆರೆಯ ಮೊದಲ ನಾಯಕರೆಂಬ ಖ್ಯಾತಿಗೆ ಪಾತ್ರರಾದರು. ವೈ. ವಿ. ರಾವ್ ನಿರ್ದೇಶನದ ಸಿನಿಮಾಕ್ಕೆ ಬೆಳ್ಳಾವೆ ನರಹರಿ ಶಾಸ್ತ್ರಿಗಳು ಸಾಹಿತ್ಯ ರಚಿಸಿದ್ದು ನಾಟಕದ ಛಾಯೆಯಿಂದಾಗಿ ಸಿನಿಮಾದಲ್ಲೂ ನಾಟಕದಂತೆಯೇ 16 ಹಾಡುಗಳನ್ನು ಬಳಸಿದ್ದು ವಿಶೇಷವೆಂದು ಎನ್. ಎಸ್. ಶ್ರೀಧರ ಮೂರ್ತಿಯವರು ಅಭಿಪ್ರಾಯಪಡುತ್ತಾರೆ. ಮೊದಲ ವಾಕ್ಚಿತ್ರವು ಆರು ವಾರಗಳ ಯಶಸ್ವಿ ಪ್ರದರ್ಶನದೊಂದಿಗೆ ಕನ್ನಡ ಚಿತ್ರ ಜಗತ್ತಿಗೆ ನಾಂದಿಯಾಯಿತು. ಜೊತೆಗೆ ರಂಗಕರ್ಮಿಗಳೇ ಮೊದಲ ಚಿತ್ರಕ್ಕೆ ಬುನಾದಿಯನ್ನು ಹಾಕಿದಂತಾಯಿತು. ಭಕ್ತ ಧ್ರುವ- ಚಿತ್ರೀಕರಣದ ಆರಂಭದ ನೆಲೆಯಲ್ಲಿ ಮೊದಲ ಚಲನಚಿತ್ರವಾಗಿದ್ದರೂ ಬಿಡುಗಡೆಯ ಕಾರಣದಿಂದ ಕನ್ನಡದ ಎರಡನೇ ವಾಕ್ಚಿತ್ರವೆಂದು ಗುರುತಿಸಿಕೊಂಡಿತು. ಹಾರ್ಮೋನಿಯಂ ಶೇಷಗಿರಿರಾಯರ ಸಂಗೀತ, ದೇವುಡುರವರ ಸಾಹಿತ್ಯದೊಂದಿಗೆ ನಾಟಕದ ಹಾಡುಗಳನ್ನೇ ಚಲನಚಿತ್ರಕ್ಕೂ ಅಳವಡಿಸಿದ್ದರೆಂದು ಗಂಗಾಧರ ಮೊದಲಿಯಾರ್ ಅವರು ಅಭಿಪ್ರಾಯಪಡುತ್ತಾರೆ. ಮೂಕಿ ಚಿತ್ರಗಳ ಕಾಲದಲ್ಲಿ ಸಿನಿಮಾ ತಯಾರಿಸಿದ್ದ ಗುಬ್ಬಿ ವೀರಣ್ಣನವರು ವಾಕ್ಚಿತ್ರದ ಆರಂಭದ ಅವಧಿಯಲ್ಲಿ

ತಮ್ಮ ಕಂಪನಿಯ ಪ್ರಸಿದ್ಧ ನಾಟಕ ಸದಾರಮೆಯನ್ನು ಕನ್ನಡದ ಮೂರನೇ ವಾಕ್ಚಿತ್ರವಾಗಿ ನಿರ್ಮಿಸಿದರು. ರಾಜಾ ಚಂದ್ರಶೇಖರ್ ಈ ಚಲನಚಿತ್ರವನ್ನು ನಿರ್ದೇಶಿಸಿದ್ದರು. ಆನಂತರದಲ್ಲಿ ಎಚ್. ಎಲ್. ಎಂ. ಸಿಂಹ ಅವರು ಬರೆದು ನಿರ್ದೇಶಿಸಿದ್ದ ಕಲಾ ಸೇವಾ ನಾಟಕ ಮಂಡಳಿಯ ಪ್ರಮುಖ ನಾಟಕ ಸಂಸಾರ ನೌಕೆ ಕನ್ನಡದ ನಾಲ್ಕನೇ ಹಾಗೂ ದಕ್ಷಿಣ ಭಾರತದ ಮೊದಲ ಸಾಂಸಾರಿಕ ಚಿತ್ರವಾಯಿತು. 1936 ಆಗಸ್ಟ್ 27ರಂದು ಬೆಂಗಳೂರಿನ ಸಾಗರ್ ಚಿತ್ರಮಂದಿರದಲ್ಲಿ ಬಿಡುಗಡೆಗೊಂಡ ಈ ಚಿತ್ರದ ಮೂಲಕ ಬಿ. ಆರ್. ಪಂತಲು ಅವರ ಸಿನಿ ಪಯಣವು ಆರಂಭವಾಯಿತು.

ವಸಂತಸೇನೆ– ಶೂದ್ರಕನ ಮೃಚ್ಛಕಟಿಕ ನಾಟಕ ಆಧಾರಿತ ಚಿತ್ರ. ಈ ಮೊದಲೇ ಟಿ. ಪಿ. ಕೈಲಾಸಂ ರವರು ಮೂಕಿಯಾಗಿ ತಯಾರಿಸಿದ್ದ ಚಿತ್ರವನ್ನು ನಾಗೇಂದ್ರ ರಾಯರು ಟಾಕೀ ಚಿತ್ರವಾಗಿ ರೂಪಿಸಿದರು. ಸುಬ್ಬಯ್ಯ ನಾಯ್ಡು ನಾಯಕರಾಗಿ ಅಭಿನಯಿಸಿದ ಚಿತ್ರವು ಹಿನ್ನೆಲೆ ಗಾಯನದ ಉಪಯೋಗಕ್ಕೂ ಸಾಕ್ಷಿಯಾಯಿತು. ಜೊತೆಗೆ ಪಿ. ಕಾಳಿಂಗರಾಯರು ಚಿತ್ರರಂಗವನ್ನು ಪ್ರವೇಶಿಸಿದರು. ನಾಗೇಂದ್ರ ರಾಯರ ವಸಂತಸೇನೆಯ ತರುವಾಯ ನಿರ್ಮಿಸಿದ ಚಲನಚಿತ್ರ ಹರಿಶ್ಚಂದ್ರ. ಸುಬ್ಬಯ್ಯ ನಾಯ್ಡು ನಾಯಕರಾಗಿ ಅಭಿನಯಿಸಿದ್ದ ಚಿತ್ರವು 1943 ಏಪ್ರಿಲ್ 16 ರಂದು ಬಿಡುಗಡೆಗೊಂಡು ಹುಬ್ಬಳ್ಳಿಯಲ್ಲಿ 29 ವಾರಗಳ ದಾಖಲೆಯ ಪ್ರದರ್ಶನ ಕಂಡಿತು ಅಲ್ಲದೆ ತಮಿಳಿಗೆ ಡಬ್ ಆಗುವ ಮೂಲಕ ಭಾರತದ ಮೊದಲ ಡಬ್ಬಿಂಗ್ ಸಿನಿಮಾ ಎಂಬ ಹೆಗ್ಗಳಿಕೆಗೂ ಪಾತ್ರವಾಯಿತು.

ಈ ಎಲ್ಲಾ ಸಿನಿಮಾಗಳ ಮೂಲ ದ್ರವ್ಯ, ಪ್ರೇರಣೆ, ಶ್ರಮ, ರಂಗಭೂಮಿಯದ್ದೇ. ಆರಂಭದ ಚಿತ್ರ ನಿರ್ಮಾತೃಗಳೆಲ್ಲ ರಂಗಭೂಮಿಯಿಂದಲೇ ಬಂದವರಾದ್ದರಿಂದ ಅದರ ನೆರಳು ಚಿತ್ರರಂಗದ ಮೇಲೆ ಬಿದ್ದಿರುವುದು ಸಹಜ. ಹೀಗೆ ನಾಟಕದ ಮಾದರಿಯನ್ನೇ ಅನುಸರಿಸಿ ರಂಗ ಪರಿವಾರದವರ ಪರಿಶ್ರಮದ ಹಿನ್ನೆಲೆಯಲ್ಲಿ ರೂಪುಗೊಂಡ ಕನ್ನಡ ಚಿತ್ರ ಜಗತ್ತಿಗೆ ಗುಬ್ಬಿ ವೀರಣ್ಣ, ಸುಬ್ಬಯ್ಯ ನಾಯ್ಡು, ಹೊನ್ನಪ್ಪ ಭಾಗವತರ್, ಬಿ. ಆರ್. ಪಂತಲು, ನಾಗೇಂದ್ರರಾವ್, ಹುಣಸೂರು ಕೃಷ್ಣಮೂರ್ತಿ, ಬಿ. ಜಯಮ್ಮ, ಎಚ್. ಎಲ್. ಎಂ. ಸಿಂಹ, ಬೆಳ್ಳಾವೆ ನರಹರಿ ಶಾಸ್ತ್ರಿ, ನಟಸಾರ್ವಭೌಮ ಡಾಕ್ಟರ್ ರಾಜಕುಮಾರ್, ಬಾಲಕೃಷ್ಣ ಮೊದಲಾದ ದಿಗ್ಗಜರ ಕೊಡುಗೆ ಅನನ್ಯವಾದದ್ದು. ನಾಟಕದ ಬೇರಿನೊಂದಿಗೆ, ಆಧುನಿಕತೆಯ ಆವಿಷ್ಕಾರಗಳೆಂಬ ರೆಂಬೆ–ಕೊಂಬೆಗಳ ಸಹಯೋಗದೊಂದಿಗೆ ಸುಂದರವಾಗಿ ಅರಳಿದ ಕುಸುಮ ಸಿನಿಮಾ. ಟಾಕೀಯಾದ ನಂತರ ಇದು ರಂಗಭೂಮಿಗೆ ಸವಾಲಾಯಿತು. ರಂಗಭೂಮಿಗೆ ಪ್ರತಿಯಾಗಿ ಜನಮನ್ನಣೆ ಪಡೆಯುವ ಮೂಲಕ ಅದರ ಕ್ಷೀಣತೆಗೂ ಕಾರಣವಾಯಿತು. ಆ ಹಂತದಲ್ಲಿ ಸಿನಿಮಾಗಳಿಂದ ರಂಗಭೂಮಿ ಎದುರಿಸಿದ ಸವಾಲನ್ನೇ ಇಂದು ದೂರದರ್ಶನದ ವಾಹಿನಿಗಳಿಂದ ಸಿನಿಮಾಗಳು ಎದುರಿಸುತ್ತಿವೆ. ಕಾಲಚಕ್ರದಲ್ಲಿ ಸೂಕ್ತ ಹೊಂದಾಣಿಕೆ ಮಾಡಿಕೊಳ್ಳುವ ಮೂಲಕ ಕೃತಿಗೆ ಸಹೃದಯನಾಗಿ, ನಾಟಕಕ್ಕೆ ಪ್ರೇಕ್ಷಕನಾಗಿ, ಸಿನಿಮಾಕ್ಕೆ ಅಭಿಮಾನಿಯಾಗಿ ಭಿನ್ನಕಲಾ ಪ್ರಕಾರಗಳನ್ನು ಆಸ್ವಾದಿಸುವ ಪ್ರೇಕ್ಷಕ ಪ್ರಭುವಿನ ಓಲೈಕೆ ಈ ಕಲಾ ಮಾಧ್ಯಮಗಳ ಮುಂದಿರುವ ದೊಡ್ಡ ಸವಾಲಾಗಿದೆ.

## ಪರಾಮರ್ಶನ ಗ್ರಂಥಗಳು:

1. ಪ್ರಶಾಂತ ನಾಯಕ ಜಿ., (2009), ಕನ್ನಡ ಸಿನಿಮಾಲೋಕ, ಮೈಸೂರು: ರಚನಾ ಪ್ರಕಾಶನ.
2. ಸತ್ಯ ಲಿಂಗರಾಜು ಆರ್. ಜೆ., (2004), ಸಿನಿಮಾ ಸಿನಿಮಾ, ಮೈಸೂರು: ರೂಪ ಪ್ರಕಾಶನ.
3. ವೈಕುಂಠರಾಜು ಬಿ. ವಿ., (2007), ಕನ್ನಡ ರಂಗಭೂಮಿ, ಬೆಂಗಳೂರು: ಸನ್ನತ್ ಪ್ರಕಾಶನ.
4. ಗೌರಿ ಸುಂದರ್, (2009), ಬೆಳ್ಳಿತೆರೆಯ ಬಾಂಧವ್ಯ, ಬೆಂಗಳೂರು: ಸುಂದರ ಪ್ರಕಾಶನ.
5. ಶ್ರೀಧರಮೂರ್ತಿ ಎನ್. ಎಸ್. (ಸಂ.), (2009), ಜೋಡಿದೀಪಗಳು, ಬೆಂಗಳೂರು: ಸುಂದರ ಪ್ರಕಾಶನ.